**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 24/2022**

| | | |
|---|---|---|
| ಸಾಕ್ಷಿದಾರರ ಹೆಸರು | - ಕೆ.ರಮೇಶಗೌಡ | ಪಿಡಬ್ಲೂ - 08 |
| ತಂದೆಯ ಹೆಸರು | - ಕಲ್ಲೇಗೌಡ | ಸಿಡಬ್ಲೂ - 14 |
| ವಯಸ್ಸು | - 79 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಕಬ್ಬಿನಹಳ್ಳಿ | |

ದಿನಾಂಕಃ 20.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

<u>ಮುಖ್ಯ ವಿಚಾರಣೆ : ಪ್ರಭಾರೆ ಸರ್ಕಾರಿ ಅಭಿಯೋಜಕರಿಂದ-</u>

1. ನಾನು ಕಾಫಿ ಬೆಳೆಗಾರ. ನಾನು ಕಬ್ಬಿನಹಳ್ಳಿ ಗ್ರಾಮದ ಸರ್ವೆ ನಂಬರು 212/2 ರಲ್ಲಿ ಒಟ್ಟು 24 ಎಕರೆ ಕಾಫಿ ತೋಟವನ್ನು ಹೊಂದಿದ್ದೇನೆ. ಸದರಿ ಜಮೀನು ನನ್ನ ಹೆಸರಿನಲ್ಲಿದೆ. ನಾನು

ಸದರಿ ಎಸ್ಟೇಟಿನಲ್ಲಿಯೇ ಮನೆ ಕಟ್ಟಿಕೊಂಡು ಅಲ್ಲೇ ವಾಸವಾಗಿದ್ದೇನೆ.

2. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು. ಈಗ್ಗೆ 4 ವರ್ಷಗಳ ಹಿಂದೆ ಘಟನೆಯ ಎರಡು ವಾರಗಳ ಹಿಂದೆ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶೇಷಿರವರು ಒಟ್ಟಿಗೆ ನಮ್ಮ ಎಸ್ಟೇಟಿಗೆ ಕೂಲಿ ಕೆಲಸಕ್ಕೆ ಬಂದಿದ್ದರು. ನಮ್ಮ ಎಸ್ಟೇಟಿನಲ್ಲಿ ಕೂಲಿ ಕೆಲಸದವರಿಗೆ ಉಳಿದುಕೊಳ್ಳಲು ಕೂಲಿ ಲೈನ್ ಮನೆಗಳನ್ನು ಕಟ್ಟಿಸಿದ್ದೇನೆ. ನಮ್ಮ ಮನೆಯಿಂದ ಸುಮಾರು 300 ರಿಂದ 400 ಅಡಿ ಒಳಗೆ ಸದರಿ ಕೂಲಿ ಲೈನ್ ಮನೆಗಳು ಇವೆ.

3. ಚಾಸಾ.16 ಚೇತನ್ ರವರು ನಮ್ಮ ಎಸ್ಟೇಟಿನ ಮ್ಯಾನೇಜರ್ ಮತ್ತು ರೈಟರ್ ಆಗಿ ಕೆಲಸ ಮಾಡಿಕೊಂಡಿದ್ದರು. ಆರೋಪಿ ಮತ್ತು ಶೇಷಪ್ಪನಿಗೆ ನಮ್ಮ ಎಸ್ಟೇಟಿನಲ್ಲಿ ಉಳಿದುಕೊಳ್ಳಲು ಚಾಸಾ.16 ರವರ ಮನೆಯಿಂದ ಸ್ವಲ್ಪ ಕೆಳಗೆ ಇದ್ದ ಒಂದು ಕೂಲಿಲೈನ್ ಮನೆಯನ್ನು ಕೊಟ್ಟಿದ್ದೆನು. ಅದರಲ್ಲಿ ಅವರಿಬ್ಬರು ಒಟ್ಟಿಗೆ ವಾಸವಾಗಿದ್ದರು. ಆರೋಪಿ ಮತ್ತು ಶೇಷಪ್ಪ ಮುಂಗಡ ಹಣವನ್ನು ಕೇಳಿದ್ದರಿಂದ ನಾನು ಒಪ್ಪಿ ಅವರಿಗೆ ರೂ.3,000/- ಹಣವನ್ನು ಮುಂಗಡವಾಗಿ ಕೊಟ್ಟು ನಂತರ ಅವರನ್ನು ಚಾಸಾ.16 ರವರೊಂದಿಗೆ ಅವರಿಗೆ ಉಳಿದುಕೊಳ್ಳಲು ನೀಡಲಾಗಿದ್ದ ಮನೆಯ ಕೀಯನ್ನು ಕೊಟ್ಟು ಕಳುಹಿಸಿದೆನು.

4. ಪ್ರತಿ ಬುಧವಾರದಂದು ನಮ್ಮ ಎಸ್ಟೇಟಿನಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಬಟವಾಡೆ ಮಾಡಿ ಹಣ ಕೊಡುತ್ತೇನೆ. ಆ ದಿನ ಬಟವಾಡೆ ಮಾಡಿದ ಬಳಿಕ ಕಾರ್ಮಿಕರಿಗೆ ರಜೆಯನ್ನು ನೀಡುತ್ತೇನೆ. ಘಟನೆಯ ದಿನ ಬುಧವಾರವಾಗಿತ್ತು. ಆ ದಿನ ಆರೋಪಿ ಮತ್ತು ಶೇಷಪ್ಪನಿಗೂ ಸಹ ಬಟವಾಡೆ ಮಾಡಿ ಹಣವನ್ನು ನೀಡಿ ರಜೆ ಕೊಟ್ಟಿದ್ದೆನು. ಆರೋಪಿ ಮತ್ತು ಶೇಷಪ್ಪರವರು ಒಟ್ಟಿಗೆ ಕೆಲಸ ಮಾಡಿದ್ದರಿಂದ ಇಬ್ಬರಿಗೂ ಸೇರಿಸಿ ರೂ.1,800/- ಗಳನ್ನು ಶೇಷಪ್ಪನಿಗೆ ಕೊಟ್ಟು ಕಳುಹಿಸಿದ್ದೆನು. ನಂತರ ನಾನು ತೋಟದ ಮನೆಯಲ್ಲಿಯೇ ಇದ್ದೆನು. ಸಂಜೆ ಸುಮಾರು 5 ಗಂಟೆಯಿಂದ 5.30 ಗಂಟೆಗೆ ಆರೋಪಿ ಮನು ನಮ್ಮ ಮನೆಗೆ ಬಂದು, ನಮ್ಮ ಅತ್ತೆ ಬಂದಿದ್ದಾರೆ, ಬೆಳಿಗ್ಗೆ ಕೊಟ್ಟ ಹಣ ರೇಷನ್ ತಂದು ಖರ್ಚಾಗಿದೆ, ಇನ್ನೂ ಸಾವಿರ ರೂಪಾಯಿ ಕೊಡಿ ಎಂದು ಕೇಳಿದನು, ಆಗ ನಾನು ರೂ.500/- ಕೊಟ್ಟು ಕಳುಹಿಸಿದೆನು.

5. ಮಾರನೆ ದಿನ ಆರೋಪಿ ಮತ್ತು ಶೇಷಪ್ಪ ಕೆಲಸಕ್ಕೆ ಬರಲಿಲ್ಲ. ಆ ವಿಚಾರವನ್ನು ಚಾಸಾ.16 ರವರು ನನಗೆ ತಿಳಿಸಿದರು. ಸಂಜೆಯವರೆಗೂ ಅವರು ಕೆಲಸಕ್ಕೆ ಬಾರದಿದ್ದಾಗ ಏನಾಗಿದೆ ಎಂದು ಹೋಗಿ ನೋಡು ಎಂದು ಚಸಾ.16 ರವರನ್ನು ಅವರು ಉಳಿದುಕೊಂಡಿದ್ದ ಕೂಲಿಲೈನ್ ಮನೆಗೆ ಕಳುಹಿಸಿದೆನು. ಅದರಂತೆ ಚಾಸಾ.16 ರವರು ಆರೋಪಿ ಮತ್ತು ಶೇಷಪ್ಪ ಉಳಿದುಕೊಂಡಿದ್ದ ಕೂಲಿ ಲೈನ್ ಮನೆಯ ಹತ್ತಿರ ಹೋಗಿ ನೋಡಿದಾಗ ಮನೆಯ ಬಾಗಿಲು ಹಾಕಿದ್ದರಿಂದ ಕಿಟಕಿಯಿಂದ

ನೋಡಿದಾಗ ಅಲ್ಲಿ ಯಾವುದೋ ಶವವನ್ನು ಬಟ್ಟೆಯಿಂದ ಮುಚ್ಚಿರುವುದು, ಸುತ್ತಮುತ್ತ ರಕ್ತ ಹರಿದಿರುವುದು ಕಂಡುಬಂದಿದ್ದಾಗಿ ಚಾಸಾ.16 ರವರು ನನಗೆ ತಿಳಿಸಿದರು.

6. ನಂತರ ನಾನು ಮತ್ತು ನನ್ನ ಮಗನಾದ ಚಾಸಾ.15 ವಾಸುದೇವರ್ ರವರು ಆರೋಪಿ ಮತ್ತು ಶೇಷಪ್ಪ ಉಳಿದುಕೊಂಡಿದ್ದ ಕೂಲಿಲೈನ್ ಮನೆಯ ಹತ್ತಿರ ಹೋಗಿ ಕಿಟಕಿಯಿಂದ ನೋಡಿದಾಗ ಮೇಲೆ ಹೇಳಿದಂತೆ ಯಾವುದೋ ಶವವನ್ನು ಬಟ್ಟೆಯಿಂದ ಮುಚ್ಚಿರುವುದು, ಸುತ್ತಮುತ್ತ ರಕ್ತ ಹರಿದಿರುವುದು ಕಂಡುಬಂತು. ನಾನು ಮತ್ತು ನನ್ನ ಮಗ ಚಾಸಾ.15 ಕೂಡಲೇ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರಿಗೆ ಫೋನ್ ಮಾಡಿ ವಿಷಯ ತಿಳಿಸಿದೆವು.

7. ನಂತರ ಸಂಜೆ 6 ರಿಂದ 6.30 ಗಂಟೆ ಸುಮಾರಿಗೆ ಪೊಲೀಸರು ಅಲ್ಲಿಗೆ ಬಂದು ಆರೋಪಿ ಮತ್ತು ಶೇಷಪ್ಪ ವಾಸವಾಗಿದ್ದ ಮನೆಯ ಬಾಗಿಲನ್ನು ತೆಗೆದರು. ನಂತರ ಪೊಲೀಸರು ಮತ್ತು ನಾವು ಒಳಗೆ ಹೋಗಿ ನೋಡಿದಾಗ ಕೊಲೆಯಾಗಿದ್ದ ವ್ಯಕ್ತಿ ಶೇಷಪ್ಪ ಎಂದು ತಿಳಿಯಿತು. ಆ ಸಮಯದಲ್ಲಿ ಆರೋಪಿ ಅಲ್ಲಿ ಇರಲಿಲ್ಲ.

8. ಸಾಕ್ಷಿಗೆ ಈಗಾಗಲೇ ನಿಪಿ.16 ಮತ್ತು ಪಿ.17 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಸದರಿ ಫೋಟೋಗಳಲ್ಲಿ ಕಂಡುಬರುವ ನಮ್ಮ ಕೂಲಿ ಲೈನ್ ಮನೆಯಲ್ಲಿಯೇ ಆರೋಪಿ ಮತ್ತು ಶೇಷಪ್ಪ ಒಟ್ಟಿಗೆ

ವಾಸವಾಗಿದ್ದಾಗಿ ನುಡಿದಿರುತ್ತಾರೆ. ಸಾಕ್ಷಿಗೆ ಈಗಾಗಲೇ ನಿಪಿ.3 ರಿಂದ ಪಿ.5 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಪೊಲೀಸರು ಬಂದು ಬಾಗಿಲನ್ನು ತೆಗೆದ ಬಳಿಕ ನಾವು ಒಳಗೆ ಹೋಗಿ ನೋಡಿದಾಗ ಶೇಷಪ್ಪನ ಶವ ಕಂಡಬಂದ ದೃಶ್ಯ ಅವುಗಳಲ್ಲಿ ಕಂಡುಬರುವುದಾಗಿ ನುಡಿದಿರುತ್ತಾರೆ.

9. ಪೊಲೀಸರು ಶೇಷಪ್ಪನ ಪ್ಯಾಂಟಿನ ಜೇಬಿನಲ್ಲಿದ್ದ ಒಂದು ಆಧಾರ ಕಾರ್ಡನ್ನು ತೆಗೆದು ಅದರಲ್ಲಿದ್ದ ವಿಳಾಸದ ಮೇರೆಗೆ ಶೇಷಪ್ಪನ ತಂದೆಯ ಮಾಹಿತಿಯನ್ನು ಪಡೆದು ಘಟನೆಯ ಬಗ್ಗೆ ಅವರಿಗೆ ಮಾಹಿತಿಯನ್ನು ಕೊಟ್ಟರು. ನಂತರ ಪೊಲೀಸರು ಶೇಷಪ್ಪನ ಶವವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದರು.

10. ತೋಟದಲ್ಲಿ ಕೆಲಸ ಮಾಡಲು ಬೇಕಾಗುವ ಕತ್ತಿ ಮತ್ತು ಗುದ್ದಲಿಗಳನ್ನು ನಾನೇ ಖರೀದಿಸಿ ಪ್ರತಿ ಕೂಲಿ ಕಾರ್ಮಿಕರಿಗೆ ಕೊಡುತ್ತೇನೆ. ಅದೇ ರೀತಿ ಆರೋಪಿ ಮತ್ತು ಶೇಷಪ್ಪನಿಗೂ ಸಹ ಕತ್ತಿ ಮತ್ತು ಗುದ್ದಲಿಗಳನ್ನು ಕೊಟ್ಟಿದ್ದೆನು.

11. ಹಿಂದಿನ ದಿನ ಅಂದರೆ ನಾನು ಬಟವಾಡೆ ಮಾಡಿದ ದಿನ ಆರೋಪಿ ಮತ್ತು ಶೇಷಪ್ಪ ಮಧ್ಯಪಾನ ಮಾಡಿ ಗಲಾಟೆ ಮಾಡಿಕೊಳ್ಳುತ್ತಿದ್ದಾಗಿ ಅದನ್ನು ನೋಡಿದ ಚಾಸಾ.16 ರವರು ನೀವು ಗಲಾಟೆ ಮಾಡಿಕೊಳ್ಳುತ್ತಿದ್ದರೆ ನಾನು ಅದನ್ನು ಮಾಲೀಕರಿಗೆ ಅಂದರೆ ನನಗೆ ತಿಳಿಸುವುದಾಗಿ ಅವರಿಗೆ ಹೇಳಿ ವಾರ್ನಿಂಗ್ ಕೊಟ್ಟಿದ್ದಾಗಿ ಚಾಸಾ.16 ರವರು ನನಗೆ ತಿಳಿಸಿದರು.

ಆರೋಪಿ ಮತ್ತು ಶೇಷಪ್ಪರವರು ಯಾವ ವಿಚಾರಕ್ಕೆ ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

12. ಶೇಷಪ್ಪನ ತಂದೆ ಪೊಲೀಸರಿಗೆ ದೂರು ಕೊಟ್ಟ ವಿಚಾರ ತಿಳಿಯಿತು. ನಂತರ ಪೊಲೀಸರು ನನ್ನನ್ನು ಎರಡು ಬಾರಿ ವಿಚಾರಿಸಿ ನನ್ನ ಹೇಳಿಕೆಗಳನ್ನು ಪಡೆದುಕೊಂಡಿದ್ದಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್. ವಕೀಲರಿಂದಃ</u>

13. ನಿಮ್ಮ ಎಸ್ಟೇಟಿನಲ್ಲಿ ಕೂಲಿ ಕಾರ್ಮಿಕರಿಗೆಂದು ಹಾಜರಾತಿ ವಹಿಯನ್ನು ನಿರ್ವಹಿಸಲಾಗುತ್ತದೆ ಎಂದರೆ ಸರಿ. ಖಾಯಂ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು ಮತ್ತು ತಾತ್ಕಾಲಿಕ ಕಾರ್ಮಿಕರ ಬಗ್ಗೆ ಪ್ರತ್ಯೇಕ ದಾಖಲೆಗಳನ್ನು ನಿರ್ವಹಿಸಲಾಗುತ್ತದೆ ಎಂದರೆ ಸಾಕ್ಷಿ ನಾವು ನಿರ್ವಹಿಸುವುದಿಲ್ಲ ಎನ್ನುತ್ತಾರೆ. ಆರೋಪಿ ಮತ್ತು ಶೇಷಪ್ಪ ನಿಮ್ಮ ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ಹಾಜರಾತಿ ಪುಸ್ತಕವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಮ್ಮ ಎಸ್ಟೇಟಿನಲ್ಲಿ ಇರುವ ಬಗ್ಗೆ ಹುಡುಕಿ ನೋಡಬೇಕು ಎನ್ನುತ್ತಾರೆ. ಸದರಿ ಪುಸ್ತಕವನ್ನು ಪೊಲೀಸರು ಪರಿಶೀಲಿಸಿಲ್ಲ ಮತ್ತು ಪಡೆದುಕೊಂಡಿಲ್ಲ, ಆದರೆ ಅವರು ಎಷ್ಟು ದಿನಗಳಿಂದ ಕೆಲಸ ಮಾಡುತ್ತಿದ್ದರು ಎಂದು ಕೇಳಿ ಮಾಹಿತಿ ಪಡೆದುಕೊಂಡಿದ್ದಾರೆ. ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ಪೂರ್ವದಲ್ಲಿ ಅವರ ಆಧಾರ್ ಕಾರ್ಡ, ಪಾನ್ ಕಾರ್ಡ್ ಅಥವಾ ಚುನಾವಣಾ ಗುರುತಿನ ಚೀಟಿಯನ್ನು

ಪಡೆದುಕೊಳ್ಳುವುದು ಕಡ್ಡಾಯ ಎಂದರೆ ಸಾಕ್ಷಿ ಮೊದಲಿಗೆ ಹಾಗೇ ಇರಲಿಲ್ಲ, ಈಗ್ಗೆ ಅಸ್ಸಾಂನಿಂದ ಹೆಚ್ಚು ಜನರು ಬರುತ್ತಿರುವುದರಿಂದ ಪೊಲೀಸರು ಆ ರೀತಿ ನಿರ್ದೇಶನ ಕೊಟ್ಟಿದ್ದಾರೆ ಎನ್ನುತ್ತಾರೆ. ಕುಟುಂಬ ಸಮೇತ ಬಂದವರಿಗೆ ಮಾತ್ರ ಕೆಲಸಕ್ಕೆ ಆದ್ಯತೆ ನೀಡಲಾಗುತ್ತದೆ ಎಂದರೆ ಸರಿಯಲ್ಲ. ಕಾರ್ಮಿಕರಿಗೆ ಬಾಕಿ ಚೀಟಿ ಕೊಡುವ ಪದ್ಧತಿ ಇದೆ ಎಂದರೆ ಸಾಕ್ಷಿ ಮೊದಲು ಇತ್ತು, ಈಗ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಕೆಲಸಗಾರರು ಸಿಗುವುದೇ ಕಷ್ಟವಾಗಿದೆ ಎನ್ನುತ್ತಾರೆ.

14. ಆರೋಪಿ ಮತ್ತು ಶೇಷಪ್ಪ ನಿಮ್ಮ ಕೂಲಿಲೈನ್ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ದಾಖಲೆ ಇಲ್ಲ, ಆದರೆ ಇಬ್ಬರು ಒಟ್ಟಿಗೆ ಬಂದು ಒಟ್ಟಿಗೆ ಉಳಿದುಕೊಂಡಿದ್ದರು ಎನ್ನುತ್ತಾರೆ. ನೀವು ಪ್ರಾವಿಡೆಂಟ್ ಫಂಡ್ ನ್ನು ಕಟ್ಟುತ್ತಿದ್ದೀರಾ ಎಂದರೆ ಸಾಕ್ಷಿ ಮೊದಲು 25 ಕ್ಕಿಂತ ಹೆಚ್ಚು ಕಾರ್ಮಿಕರು ಇದ್ದಾಗ ಕಟ್ಟುತ್ತಿದ್ದೆನು, ಈಗ ಕಟ್ಟುತ್ತಿಲ್ಲ ಎನ್ನುತ್ತಾರೆ.

15. ಆರೋಪಿ 5 ವರ್ಷಗಳ ಹಿಂದೆ ನಿಮ್ಮ ಎಸ್ಟೇಟಿನಲ್ಲಿ ಆರೋಪಿ 5 ವರ್ಷಗಳ ಕಾಲ ಕೆಲಸ ಮಾಡಿ ಹೋಗಿದ್ದನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ಈ ಹಿಂದೆ ನಮ್ಮ ಎಸ್ಟೇಟಿನಲ್ಲಿ ಕೆಲಸ ಮಾಡಿ ಹೋಗಿದ್ದೆನು ಎಂದು ನನ್ನ ಬಳಿ ಕೆಲಸಕ್ಕೆ ಸೇರಿಕೊಳ್ಳುವಾಗ ಹೇಳಿದ್ದನು, ಆದರೆ ಆತ ಕೆಲಸ ಮಾಡಿ ಹೋಗಿದ್ದ ಬಗ್ಗೆ ನನೆಪು ಇಲ್ಲ, ಕಾರಣ ಸುಮಾರು ಜನರು ಬಂದು ಹೋಗುತ್ತಾರೆ ಎನುತ್ತಾರೆ.

16. ಆರೋಪಿ ಹಿಂದೆ 5 ವರ್ಷಗಳ ಕಾಲ ನಿಮ್ಮ ಎಸ್ಟೇಟಿನಲ್ಲಿ ಕೆಲಸ ಮಾಡಿಕೊಂಡಿದ್ದು ಆ ಸಮಯದಲ್ಲಿ ನೀವು ಆತನಿಗೆ ಸರಿಯಾದ ಸಂಬಳ ಮತ್ತು ಕೊಡಬೇಕಾದ ಸವಲತ್ತುಗಳನ್ನು ಕೊಡದ ಕಾರಣ ನಿಮ್ಮ ಮತ್ತು ಆತನ ನಡುವೆ ವಿವಾದ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ನನ್ನ ಬಳಿ ಹಿಂದೆ 5 ವರ್ಷ ಕೆಲಸ ಮಾಡಿದ್ದಾಗಿ ಹೇಳಿರುವುದು ಮತ್ತು ಮೇಲೆ ಹೇಳಿದ ಕಾರಣಕ್ಕೆ ವಿವಾದ ಇತ್ತು ಎಂದು ಹೇಳಿರುವುದು ಸುಳ್ಳು ಎನ್ನುತ್ತಾರೆ. ಸಂಬಳ ಮತ್ತು ಸವಲತ್ತುಗಳನ್ನು ಕೊಡಬೇಕೆಂದು ಆರೋಪಿ ನಿರಂತರವಾಗಿ ನಿಮ್ಮನ್ನು ಕೇಳುತ್ತಿದ್ದನು ಎಂದರೆ ಸರಿಯಲ್ಲ.

17. ನೀವು ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ಅವರು ಸ್ಥಳಕ್ಕೆ ಬಂದಿದ್ದಾಗಿ ಹೇಳಿದ್ದೀರಿ ಆಗ ಪೊಲೀಸರು ನಿಮ್ಮನ್ನು ವಿಚಾರಿಸಿ ನಿಮ್ಮ ಹೇಳಿಕೆಯನ್ನು ಬರೆದುಕೊಂಡರು ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು ಎಂದರೆ ಸರಿ. ನಿಪಿ.3 ರಿಂದ ಪಿ.5 ಫೋಟೋಗಳು ಆ ಸಮಯದಲ್ಲಿ ತೆಗೆದ ಫೋಟೋಗಳು ಎಂದರೆ ಸರಿ. ಆಗ ನಿಮ್ಮ ಸಮಕ್ಷಮ ಪೊಲೀಸರು ನಿಮ್ಮ ಮಗನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ. ಪೊಲೀಸರು ನಿಮ್ಮ ಹೇಳಿಕೆಯನ್ನು ಪಡೆದುಕೊಂಡು ಸಹಿ ಪಡೆದುಕೊಂಡರು ಎಂದರೆ ಸಾಕ್ಷಿ ನಾನು ಸಹಿ ಮಾಡಿಲ್ಲ ಎನ್ನುತ್ತಾರೆ.

18. ನೀವು ಶವವನ್ನು ನೋಡಿದ ಕಾಲಕ್ಕೆ ಅದರಿಂದ ವಾಸನೆ ಬರುತ್ತಿತ್ತು ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ

ಶ್ವಾನದಳವನ್ನು ಕರೆತಂದು ಅದರಿಂದ ಪರಿಶೀಲಿಸಿದರು ಎಂದರೆ ಸರಿ. ರಾತ್ರಿ 7.30 ಗಂಟೆಯವರೆಗೆ ಪೊಲೀಸರು ಸ್ಥಳದಲ್ಲಿದ್ದರು. ಪೊಲೀಸರು ಗ್ರಾಮಸ್ಥರನ್ನು ಮತ್ತು ಸ್ಥಳದಲ್ಲಿ ನೆರೆದಿದ್ದವರನ್ನು ವಿಚಾರಿಸಿದರೇ ಎಂದರೆ ಸಾಕ್ಷಿ ವಿಚಾರಿಸಿದರು ಆದರೆ ಅವರೆಲ್ಲರು ನಮಗೇನು ಗೊತ್ತಿಲ್ಲ ಎಂದು ತಿಳಿಸಿದರು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಕೊಲೆಯಾಗಿದೆ ಎಂಬ ವಿಷಯವನ್ನು ತಿಳಿದ ಕೆಲವು ಗ್ರಾಮಸ್ಥರು ಅಲ್ಲಿಗೆ ನೋಡಲು ಬಂದಿದ್ದರು ಅಷ್ಟೇ ಎನ್ನುತ್ತಾರೆ. ಆ ಸಮಯದಲ್ಲಿ ಸುಮಾರು 10 ರಿಂದ 12 ಜನ ಕೂಲಿ ಕಾರ್ಮಿಕರು ನಮ್ಮ ಎಸ್ಟೇಟಿನಲ್ಲಿದ್ದರು. ರಾತ್ರಿ 7.30 ಗಂಟೆಯಿಂದ 8 ಗಂಟೆ ಸುಮಾರಿಗೆ ಶವವನ್ನು ಆಸ್ಪತ್ರೆಗೆ ಸಾಗಿಸಲಾಯಿತು.

19. ನೀವು ಹೇಳಿದ ಸರ್ವೆ ನಂಬರಿನಲ್ಲಿ ನೀವು ಹೇಳಿದಂತೆ 24 ಎಕರೆ ಜಮೀನು ಇಲ್ಲ ಎಂದರೆ ಸಾಕ್ಷಿ ಕೊಲೆಯಾಗಿದ್ದ ಸ್ಥಳದ ಸರ್ವೆ ನಂಬರು 212/2 ಆಗಿದೆ, ಒಟ್ಟು 10 ರಿಂದ 12 ಸರ್ವೆ ನಂಬರುಗಳಲ್ಲಿ ಒಟ್ಟು 24 ಎಕರೆ ಜಮೀನು ನನ್ನ ಹೆಸರಿನಲ್ಲಿದೆ ಎನ್ನುತ್ತಾರೆ. ನಿಮ್ಮ ಮನೆಯಿಂದ ಸುಮಾರು 300 ರಿಂದ 400 ಅಡಿ ದೂರದಲ್ಲಿ ಕೂಲಿ ಲೈನ್ ಮನೆಗಳು ಇವೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

20. ಆರೋಪಿ ಮತ್ತು ಶೇಷಪ್ಪ ಒಟ್ಟಿಗೆ ಕೆಲಸಕ್ಕೆ ಬಂದಿದ್ದರು ಎಂದು ಹೇಳಿದ್ದೀರಿ ಅವರು ಬಂದಿದ್ದು ಯಾವ ದಿನಾಂಕ, ತಿಂಗಳು ಮತ್ತು ವರ್ಷ ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಅವರು ಈಗ್ಗೆ 4 ವರ್ಷಗಳ ಹಿಂದೆ ಬಂದು ಒಂದು ವಾರ

ಕೆಲಸ ಮಾಡಿ ಬಟವಾಡೆ ತೆಗೆದುಕೊಂಡಿದ್ದರು, ನನಗೆ ತಿಂಗಳು, ದಿನಾಂಕ ನೆನಪಿಲ್ಲ ಎನ್ನುತ್ತಾರೆ.

21. ಶೇಷಪ್ಪ ಮೃತಪಡುವ 3 ವರ್ಷಗಳ ಹಿಂದಿನಿಂದ ನಿಮ್ಮ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದು ನಿಮ್ಮ ದನಗಳನ್ನು ಮೇಯಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಬಳಿ ದನಗಳೇ ಇಲ್ಲ ಎನ್ನುತ್ತಾರೆ. ಹಾಜರಾತಿ ವಹಿಯನ್ನು ಹಾಜರುಪಡಿಸಿದರೇ ನಿಮ್ಮ ತೋಟದಲ್ಲಿ ಶೇಷಪ್ಪ ಮಾತ್ರ ಕೆಲಸ ಮಾಡಿಕೊಂಡಿದ್ದು, ಆರೋಪಿ ಅಲ್ಲಿ ಕೆಲಸ ಮಾಡದೇ ಇರುವುದು ಕಂಡುಬರುತ್ತದೆ ಎನ್ನುವ ಕಾರಣಕ್ಕೆ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

22. ನೀವು ಚೆಕ್ ರೋಲ್ ಪುಸ್ತಕವನ್ನು ನಿರ್ವಹಿಸುತ್ತೀರಿ ಮತ್ತು ಅದನ್ನು ಪ್ರತಿ ವರ್ಷ ಬದಲಾಯಿಸುತ್ತೀರಿ ಎಂದರೆ ಸರಿ. Minimum Wages Act ಅಡಿಯಲ್ಲಿ ನೊಂದಣಿ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಎಲ್ಲಾ ದಾಖಲೆಗಳನ್ನು ನಿರ್ವಹಿಸುತ್ತಿದ್ದು ಅವುಗಳನ್ನು ಹಾಜರುಪಡಿಸಿದ್ದಲ್ಲಿ ಆರೋಪಿ ನಿಮ್ಮ ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದು ತಿಳಿದು ಬರುತ್ತದೆ ಎನ್ನುವ ಕಾರಣಕ್ಕೆ ಅವುಗಳನ್ನು ನಿರ್ವಹಿಸುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

23. ಒಂದು ಎಕರೆ ತೋಟವನ್ನು ನಿರ್ವಹಿಸಲು ಒಬ್ಬ ವ್ಯಕ್ತಿಯ ಅವಶ್ಯಕತೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಅದು ಕೆಲಸ ಮಾಡಿಸುವವರ ಮೇಲೆ ಅವಲಂಬಿತವಾಗಿರುತ್ತದೆ ಎನ್ನುತ್ತಾರೆ. ಆರೋಪಿ ಮತ್ತು ಶೇಷಪ್ಪ ನಿಮ್ಮ ತೋಟಕ್ಕೆ ಕೆಲಸಕ್ಕೆಂದು ಒಟ್ಟಿಗೆ ಬಂದಿದ್ದಾಗಿ, ಅವರು ಒಟ್ಟಿಗೆ ಅವರ ನಿಮ್ಮ ಕೂಲಿ ಲೈನ್ ಮನೆಯಲ್ಲಿ ವಾಸವಾಗಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

24. ಬುಧವಾರದಂದು ನೀವು ಬಟವಾಡೆ ಮಾಡಿ ರೂ.1800/- ನ್ನು ಶೇಷಪ್ಪನಿಗೆ ಕೊಟ್ಟಿರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಬುಧವಾರದ ಹಿಂದೆಯೇ ಶೇಷಪ್ಪನ ಸಾವು ಆಗಿತ್ತು ಎಂದರೆ ಸರಿಯಲ್ಲ. ಶೇಷಪ್ಪನಿಗೆ ಆಗದ ವ್ಯಕ್ತಿಗಳು ಹಲವಾರು ಜನರು ಇದ್ದರು, ಹಾಗಾಗಿ ನೀವು ಆತನಿಗೆ ಎಲ್ಲಿಗೂ ಹೋಗದಂತೆ ಗುಟ್ಟಾಗಿ ಇದ್ದು ಬಿಡು ಎಂದು ಹೇಳಿದ್ದೀರಿ ಎಂದರೆ ಸರಿಯಲ್ಲ. ಆದಾಗ್ಯೂ ಸಹ ಶೇಷಪ್ಪನ ಸಾವು ನಿಮ್ಮ ಎಸ್ಟೇಟಿನಲ್ಲಿ ಸಂಭವಿಸಿದ್ದರಿಂದ ಆರೋಪಿ ನಿಮಗೆ ತನಗೆ ಸೇರಬೇಕಾದ ಹಣ ಮತ್ತು ಸವಲತ್ತುಗಳನ್ನು ಕೊಡುವಂತೆ ಪೀಡಿಸುತ್ತಿದ್ದರಿಂದ ನೀವು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.